Sri K. HANUMANTHAIYA.—That question does not arise.

ಶ್ರೀ ವಿ. ಆರ್. ನಾಯ್ಡು.—ಗುಡಿಸಲುಗಳನ್ನು ತೆಗೆಯುತ್ತಾರೆ, ಪೀಗೆ ತೆಗೆದಾಗ ಬೇರೆ ಕಡೆ ಅವರು ಮನೆಗಳನ್ನು ಕಟ್ಟಿಕೊಂಡು ತಾನೆ ಆ ಗುಡಿಸಲುಗಳನ್ನು ಖಾಲಿಮಾಡಬೇಕು ?

(ಉತ್ತರವಿಲ್ಲ)

ಶ್ರೀ ವಿ. ಆರ್. ನಾಯ್ಡು.—ಉತ್ತರಹೇಳಿ, ಸ್ವಾಮಿ. ಮುಖ್ಯಮಂತ್ರಿಗಳಾದರೂ ಹೇಳಲಿ (ನಗು !)

ಶ್ರೀ ಕೆ. ಹನುಮಂತಯ್ಯ.—ಮಂತ್ರಿಗಳು ನಿಮ್ಮನ್ನೇ ಕರೆಸಿ ಆಗುವುದಿಲ್ಲವೆಂದು ಹೇಳಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಕೋರ್ಟಿನಲ್ಲಿ ವ್ಯವಹಾರ ನಡೆಯುತ್ತಿದೆ, ಆ ವಿಷಯ ಬೇಡಿ; ಹೋಗಲಿ, ಮತ್ತೊಮ್ಮೆ ತಾವೇ ಬಂದು ಪರಿಶೀಲನೆ ಮಾಡುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ನಮ್ಮಿಂದ ಎಷ್ಟು ಹಣ ಖರ್ಚುಮಾಡುವುದಕ್ಕೆ ಸಾಧ್ಯವೋ ಅದನ್ನು ನೋಡಿ ಮಾಡಬೇಕ .

ಶ್ರೀ ಬಿ. ಟಿ. ಕೆಂಪರಾಜ್.—ಟ್ಯಾಂಕಿನ ಹತ್ತಿರ ವಿರುವ ಪ್ರದೇಶವನ್ನು ಅಕ್ವೈರ್ ಮಾಡಿಕೊಂಡು ಆ ಜನರಿಗೆ ಬೊಂಬು ಬಜಾರಿನಲ್ಲಿ ಜಾಗ ಕೊಟ್ಟಿರುವುದು ನಿಜವೆ ?

ಶ್ರೀ ಟಿ. ಚನ್ನಯ್ಯ.—ನಿಜ.

ಶ್ರೀ ಬಿ. ಟಿ. ಕೆಂಪರಾಜ್.—ಯಾವದರಲ್ಲಿ ಕೊಟ್ಟಿದೆ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಬಿ. ಟಿ. ಕೆಂಪರಾಜ್.—ಈಗ 'ಲೇ ಔಟ್' ಮಾಡಿಕೊಡಬೇಕಾದುದರಿಂದ ರೇಟು ಹೆಚ್ಚಾಯಿತೆಂದು ಹೇಳಿದಿರಿ. ಹಿಂದೆ ಅವರಿಗೆ ಭೂಮಿಗೆ ಬದಲು ಬೇರೆ ಭೂಮಿ ಕೊಡುತ್ತೇವೆಂದು ಸರ್ಕಾರದವರು ಒಪ್ಪಿಕೊಂಡದ್ದು ನಿಜವೆ ?

ಶ್ರೀ ಕೆ. ಹನುಮಂತಯ್ಯ.—Land for land ಕೊಡುತ್ತೇವೆಂದು ಆಗ ಹೇಳಿದುದು ನಿಜ. Even now we are prepared to give. The people who take the sites must bear the cost of making roads, laying drains and pipes.

ಶ್ರೀ ವಿ. ಆರ್. ನಾಯ್ಡು.—ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿದ್ದಾಗ, ಬೊಂಬು ಬಜಾರಿನಲ್ಲಿ ಆ ಜನರಿಗೆ ಸೈಟುಗಳನ್ನು ಕೊಡಬೇಕೆಂದು ಶಿಫಾರಸಾಗಿ, ಅದು ಹಾಗೆಯೇ ನಿಂತಿರುವುದು ಗೊತ್ತಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಕೊಡುತ್ತೇವೆ. ಸರ್ಕಾರಕ್ಕೆ ಲಾಭವೇನೂ ಬೇಡ, ಎಷ್ಟು ಖರ್ಚಾಗಿದೆಯೋ ಅಷ್ಟಾದರೂ ಕೊಟ್ಟರೆ ಕೊಡುತ್ತೇವೆ.

ಶ್ರೀ ಬಿ. ಟಿ. ಕೆಂಪರಾಜ್.—ಅವರಿಂದ ಯಾವ ರೇಟಿಗೆ ಆ ಸ್ಥಳವನ್ನು ಅಕ್ವೈರ್ ಮಾಡಿಕೊಳ್ಳಲಾಗಿದೆಯೋ ಅದಕ್ಕಿಂತ ಈಗ ಅಕ್ವೈರ್ ಮಾಡಿಕೊಳ್ಳುವ ರೇಟು ಹೆಚ್ಚಾಗಿದ್ದರೆ, ಇದರಂತೆ ಸರ್ಕಾರದವರು ಅವರಿಗೆ ಕೊಡುವುದಕ್ಕೆ ಸಿದ್ಧವಾಗಿದ್ದಾರೆಯೆ ?

Sri K. HANUMANTHAIYA.—The question does not arise.

Water Supply to Pavagada Town.

Q.—559. C. T. HANUMANTHAIYA (Pavagada—Scheduled Castes).—

Will the Government be pleased to state :—

(*a*) whether it is a fact that a report has been received by them from the Pavagada Municipality stating that there is no water facility in that town and the same may be provided ;

(*b*) if so, whether they would provide funds in the current year's budget to afford water facility to the people of Pavagada Town ?

A.—Sri T. CHANNIAH (Minister for Public Health and Local Self-Government).—

(*a*) No.

(*b*) Does not arise in view of reply to (*a*).

ಶ್ರೀ ಸಿ. ಟಿ. ಹನುಮಂತಯ್ಯ.—ಪಾವಗಡ ತಾಲ್ಲೂಕಿಗೆ ವಿದ್ಯಾಮಂತ್ರಿಗಳು ದಯಮಾಡಿಸಿದ್ದಾಗ, ಅಲ್ಲಿ ನೀರಿನ ಅಭಾವವಿರುವುದರಿಂದ ನೀರಿನ ಅನುಕೂಲ ಮಾಡಿಕೊಡಬೇಕೆಂದು ಕೇಳಲಿಲ್ಲವೆ ?

ಅಧ್ಯಕ್ಷರು.—ಈಗ ಅವರು ಸಭೆಯಲ್ಲಿಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—ಈಗಲಾದರೂ ಸರ್ಕಾರದ ಗಮನಕ್ಕೆ ತಂದರೆ, ಅಲ್ಲಿ ಜನರಿಗಿರುವ ಕುಡಿಯುವ ನೀರಿನ ತೊಂದರೆಯನ್ನು ನಿವಾರಿಸಿ ಕೊಡುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ತೊಂದರೆಯಾಗಿದ್ದರೆ ಸರಿಪಡಿಸೋಣ.

Mr. SPEAKER.—Questions Nos. 157 and 361 will be taken up together.

Retrenched Officials of Bellary District.

Q.—157. Sri Kotra BASAVANA GOUD (Kudligi).—

Will the Government be pleased to state :—

(*a*) the number of people retrenched from various departments in Bellary District after its merger ;

(*b*) the number and names of posts and persons filled and appointed since merger up-to-date ?

A.—Sri Kadidal MANJAPPA (Minister for Revenue and Public Works).—

(*a*) 99.

(*b*) 1. Number—270.

2. Please see the Statement appended below regarding the names of posts filled and persons appointed since merger up-to-date.